**<u>ಸಾಕ್ಷಿಯನ್ನು ದಿಃ 20.07.2026 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.</u>**

**<u>ಪಾಟೀ ಸವಾಲುಃ ಓ ಎಸ್ 83/2021 ರಲ್ಲಿ ವಾದಿ ಪರ ಶ್ರೀ ವಿ ಜೆ ಎಂ ವಕೀಲರಿಂದಃ-</u>**

ನಾನು ಬಿ ಎ ಪದವಿಧರ . ನನ್ನ ತಾತ ಶಂಕರಪ್ಪ, ನನ್ನ ಅಜ್ಜಿ ಪಾರ್ವತಮ್ಮ ಎಂದರೆ ಸರಿ . ನನ್ನ ತಾತ ದಿಃ 29.01.2013 ರಂದು ಮೃತರಾಗಿರುತ್ತಾರೆ . ನನ್ನ ಅಜ್ಜಿ ದಿಃ 02.01.2021 ರಂದು ಮೃತರಾಗಿರುತ್ತಾರೆ . ನನ್ನ ಅಜ್ಜಿ ಮೃತರಾಗುವ ಸಮಯದಲ್ಲಿ ನನ್ನ ಜೊತೆ ವಾಸ ಇದ್ದರು . ನನ್ನ ತಾತನಿಗೆ ಒಟ್ಟು ಆಸ್ತಿ ಇತ್ತು ಎಂದು ನನಗೆ ಗೊತ್ತಿಲ್ಲ . ನನ್ನ ತಾತನಿಗೆ ನನ್ನ ತಂದೆ ಸೋಮಪ್ಪ , ಇಶ್ವರಪ್ಪ ಹಾಗೂ ಸುರೇಶ 3 ಜನ ಮಕ್ಕಳು ಎಂದರೆ ಸರಿ . ನನ್ನ ತಾತನ ಕಾಲವಾದ ನಂತರ 2015 ರಲ್ಲಿ ನನ್ನ ಅಜ್ಜಿ , ನನ್ನ ತಂದೆ ಹಾಗೂ ಚಿಕ್ಕಪ್ಪಂದೀರು ವಿಭಾಗ ಮಾಡಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ . ಸದರಿ ವಿಭಾಗದಂತೆ ನನ್ನ ಅಜ್ಜಿಗೆ ಸರ್ವೆ ನಂಬರ್ 234/1 ಎ 2 ರಲ್ಲಿ 3 ಎಕರೆ 22 ಗುಂಟೆ ಜಮೀನು ಬಂದಿತ್ತು ಎಂದರೆ ನನಗೆ ವಿಭಾಗವಾಗಿರುವುದೇ ಗೊತ್ತಿಲ್ಲ . ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿನ ಅಂಶಗಳನ್ನು ನಾನೇ ಹೇಳಿ ಬರೆಸಿರುತ್ತೇನೆ . ನನ್ನ ಅಜ್ಜಿ ತನ್ನ ಸ್ವಯಾರ್ಜಿತ ಆಸ್ತಿಯನ್ನು ನನಗೆ ದಾನ ಮಾಡಿದ್ದು , ಅದು ಅವರಿಗೂ ಬರಬೇಕು ಎಂದು ನನ್ನ ಚಿಕ್ಕಪ್ಪ ಈ ದಾವೆಯನ್ನು ಸಲ್ಲಿಸಿರುತ್ತಾರೆ . ಹಾಗೆ ಕೇಳಿರುತ್ತಿರುವುದು ತಪ್ಪು ಎಂದು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಹೇಳಿರುತ್ತೇನೆ .

ನನ್ನ ತಂದೆ ಚಿಕ್ಕಪ್ಪಂದೀರ ಮೇರೆಗೆ ಹಾಕಿರುವ ಒ ಎಸ್ 127/2020 ರ ಬಗ್ಗೆ ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುತ್ತೇನೆ . ಒ ಎಸ್ 83/2021 ರಲ್ಲಿ ಮಾರಾಟ ಮಾಡಬಾರದು ಎಂದು ತಡೆ ಆಜ್ಞೆ ಆಗಿತ್ತು ಎಂದರೆ ಸರಿ . ಸದರಿ ತಡೆ ಆಜ್ಞೆಯ ವಿರುದ್ಧ ಮಾನ್ಯ ಜಿಲ್ಲಾ ನ್ಯಾಯಾಲಯದಲ್ಲಿ ಅಪೀಲು ಹೋಗಿದ್ದು , ಸದರಿ ಅಪೀಲು ವಜಾ ಆಗಿತ್ತು ಎಂದರೆ ಸರಿ . ಆ ನಂತರ ರಿಟ್ 12277/2023 ರಂತೆ ಅಪೀಲು ಹೋಗಿದ್ದೆ ಎಂದರೆ ಸರಿ . ಸದರಿ ಅಪೀಲಿನಲ್ಲಿ 1/3 ಭಾಗದ ಬಾಡಿಗೆಯನ್ನು ನ್ಯಾಯಾಲಯದಲ್ಲಿ ಡೆಪಾಸಿಟ್ ಮಾಡುವಂತೆ ಆದೇಶ ವಾಗಿರುತ್ತದೆ . ಸರ್ವೆ ನಂಬರ್ 1234/1 ಎ 2 ರಲ್ಲಿ 34 ಗುಂಟೆ ರಂತೆ 17 ಗುಂಟೆ ವಾಣಿಜ್ಯಕ್ಕೆ ಮತ್ತು 17 ಗುಂಟೆ ಕೈಗಾರಿಕೆಗೆ ಎಂದು ಅನ್ಯಕಾಂತ ವಾಗಿರುತ್ತದೆ . ಕೈಗಾರಿಕೆ ಎಂದರೆ ರೈಸ್ ಮಿಲ್ ಮಾಡಲಾಗಿರುತ್ತದೆ . ಸದರಿ ರೈಸ್ ಮಿಲ್ ಮೇಲೆ ಕಾಂಪ್ಲೆಕ್ಸ್ ಮಾಡಿದ್ದು , ಒಂದು ಬಾರ್ ಇದ್ದು ಅದನ್ನು

ಬಾಡಿಗೆಗೆ ಕೊಟ್ಟಿರುತ್ತೇನೆ . ಸದರಿ ಸರ್ವೆ ನಂಬರ್ ನಲ್ಲಿ ವೇ ಬ್ರೀಡ್ಜ್ ಇರುತ್ತದೆ . ವಾಸದ ಒಂದು ಮನೆ ಇದ್ದು ಅದರಲ್ಲಿ ಎರಡು ಪೋರ್ಷನ್ ಇರುತ್ತದೆ . ಕೃಷಿ ಇಲಾಖೆ ಗೆ ಬಾಡಿಗೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ . ಚೀಲ ಒಲಿಯಲು ರಿಪೇರಿ ಮಾಡಲು ಬಾಡಿಗೆಗೆ ಕೊಡಲಾಗುತ್ತದೆ ಎಂದರೆ ಸರಿಯಲ್ಲ . ನನ್ನ ಕಾಂಪ್ಲೆಕ್ಸ್ ನಲ್ಲಿ ಕೆಳಗೆ ಒಟ್ಟು 8 ಮಳಿಗೆಗಳು , ಮೇಲೆ 5 ಮಳಿಗೆಗಳು ಇರುತ್ತದೆ . ಮೇಲಿನ ನಾಲ್ಕು ಮಳಿಗೆಗಳಲ್ಲಿ ನಾನೇ ಟೈಲ್ಸ್ ಅಂಗಡಿ ಇಟ್ಟಿರುತ್ತೇನೆ . ಕೆಳಗಡೆಯ ರಾಗಿ ಮಿಲ್ ಮತ್ತು ಗೋಣಿ ಚೀಲ ಒಲೆಯುವ ಘಟಕವನ್ನು ನಾನೇ ಇಟ್ಟಿರುತ್ತೇನೆ . ಸದರಿ ಆಸ್ತಿಯನ್ನು ದಿಃ 24.05.2015 ರಲ್ಲಿ ನನ್ನ ಅಜ್ಜಿ ನನಗೆ ದಾನ ಪತ್ರ ಮಾಡಿಕೆಟ್ಟಿರುತ್ತಾರೆ.

2020 ರ ಡಿಸೆಂಬರ್ ನಲ್ಲಿ ನನ್ನ ಅಜ್ಜಿ ನನ್ನ ತಂದೆ ಮತ್ತ ಚಿಕ್ಕಪ್ಪನ ಹಾಗೂ ನನ್ನನ್ನು ಪಕ್ಷಗಾರನ್ನಾಗಿ ಮಾಡಿ ಎ ಸಿ ನ್ಯಾಯಾಲಯದಲ್ಲಿ ತಾನು ಕೊಟ್ಟಿರುವ ದಾನವನ್ನು ರದ್ದು ಗೊಳಿಸಬೇಕು ಎಂದು ಹೇಳಿ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ . ಸದರಿ ಅರ್ಜಿ ನೋಟೀಸು ಬಂದ 1 ವಾರದಲ್ಲಿ ಅಜ್ಜಿ ತೀರಿಕೊಂಡಿದ್ದು ತದ ನಂತರ ಅದು ಮುಕ್ತಾಯಗೊಂಡಿತ್ತು ಎಂದರೆ ಸರಿ . ರೈಸ್ ಮಿಲ್ಲಿಗೆ ವಿದ್ಯುತ್ ಸಂಪರ್ಕ ಪಡೆಯಲು ರೂ. 1,08,770/ ಹಣವನ್ನು ಪಾವತಿ ಮಾಡಿರುವ ಬಗ್ಗೆ ರಶೀದಿಯನ್ನು ಹಾಜರು ಪಡಿಸಿರುತ್ತೇನೆ . ಸದರಿ ಸ್ವತ್ತಿನಲ್ಲಿ ಮಳಿಗೆ ಕಟ್ಟಲು 44 ಲಕ್ಷ ಸಾಲ ಮಾಡಿರುತ್ತೇನೆ ಎಂದು ಹೇಳಿದ್ದು , ಆ ಬಗ್ಗೆ ದಾಖಲೆ ಕೊಟ್ಟಿರುತ್ತೇನೆ . ಸಾಕ್ಷಿಗೆ ತಾನು ಕೊಟ್ಟಿರುವ ದಾಖಲೆಯನ್ನು ತೋರಿಸಿ ಅದರಲ್ಲಿ ಸದರಿ ದಾಖಲೆ ಯಾವುದು ಎಂದು ಕೇಳಲಾಗಿ ಸಾಕ್ಷಿ ಬ್ಯಾಂಕ್ ಲೋನ್ ದಾಖಲೆ ಹಾಜರು ಪಡಿಸಿರುತ್ತೇನೆ ಎಂದು ತೋರಿಸಿರುತ್ತಾರೆ .

**ಕೆಲವೊಂದು ದಾಖಲೆಗಳನ್ನು ನಿಶಾನೆ ಯಾಗಿ ದಾಖಲಿಸಿಕೊಳ್ಳಲು ಮುಂದುವರೆದ ಪಾಟಿ ಸವಾಲಿಗೆ ಸಮಯ ನೀಡಲಾಯಿತು .**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)

**1** ನೇ ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್

ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.